

## ಕಿರುತೆರೆಯಲ್ಲಿ ಗಲಿಬಿಲಿ ಸರ್ಕಸ್

ಕಲರ್ಸ್ ಕನ್ನಡದ ‘ಫ್ಯಾಮಿಲಿ ಗ್ಯಾಂಗ್‌ಸ್ಟರ್ಸ್’ ಕಾರ್ಯಕ್ರಮ ಇಷ್ಟವಾಗಲಿಲ್ಲ. ಮನರಂಜನೆಯ ಹೆಸರಿನಲ್ಲಿ ಸರ್ಕಸ್ ಮಾಡುವುದು ಹಿತವೆನ್ನಿಸಲಿಲ್ಲ. ಗಲಿಬಿಲಿ ಉಂಟು ಮಾಡುವ ‘ಗಿಚ್ಚಿ ಗಿಲಿ ಗಿಲಿ’, ‘ನಮ್ಮಮ್ಮ ಸೂಪರ್ ಸ್ಟಾರ್’ ಮೊದಲಾದ ಶೋಗಳು ಇದಕ್ಕೆ ಹೊರತಾಗಿಲ್ಲ. ‘ಎದೆತುಂಬಿ ಹಾಡುವೆನು’ ಸೇರಿದಂತೆ ಅನೇಕ ಸಂಗೀತ ಕಾರ್ಯಕ್ರಮಗಳು ಹಾಗೂ ನೃತ್ಯ ಕಾರ್ಯಕ್ರಮಗಳು ಸಹ್ಯ ಎನಿಸುತ್ತಿದ್ದವು. ಇತ್ತೀಚಿನ ರಿಯಾಲಿಟಿ ಶೋಗಳಲ್ಲಿ ಮನರಂಜನೆ ಮಾಯವಾಗಿ ಅವುಗಳ ಜಾಗದಲ್ಲಿ ಸರ್ಕಸ್ ಮೆರೆಯುತ್ತಿರುವುದರಿಂದ ಮನರಂಜನೆಯನ್ನು ಹುಡುಕಬೇಕಾಗಿದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಶಿವಪ್ಪ ಕಾಯೋ ತಂದೆ...

ಕಲರ್ಸ್ ಕನ್ನಡದಲ್ಲಿ ಧಾರಾವಾಹಿಗಳು ಬೇರೆ ಬೇರೆ ಹೆಸರಿನಲ್ಲಿದ್ದರೂ ವಿಷಯ ಮಾತ್ರ ಒಂದೇ ಎಂದೆನಿಸುತ್ತದೆ. ನಾಯಕಿ ಬಾಯಲ್ಲಿ ಬೆರಳಿಟ್ಟರೆ ಕಚ್ಚಲು ಬಾರದಷ್ಟು ಮುಗ್ಧ ಒಡಪಾಯಿಯಾಗಿ ಕಂಡರೂ, ಕೆಲವೊಮ್ಮೆ ಜಗತ್ತೇ ತಿರುಗಿ ಬಿದ್ದರೂ ಬಂಡೆಯಂತೆ ದೃಢವಾಗಿ ನಿಲ್ಲುವುದು. ‘ಹೆಣ್ಣಿಗೆ ಹೆಣ್ಣೇ ಶತ್ರು’ ಎಂಬಂತೆ ಖಳನಾಯಕಿಯರ ಹಾವಳಿ. ದೀಪ ಆರುವುದು, ಮಾಂಗಲ್ಯಸರ ಹರಿದು ಬೀಳುವ ಮೂಢನಂಬಿಕೆಗಳ ವೈಭವೀಕರಣ. ನಾಯಕ–ನಾಯಕಿ ಮದುವೆಯಾದರೂ ಒಟ್ಟಾಗಿ ಸಂಸಾರ ನಡೆಸದಿರುವುದು. ಹೀಗೆ ಅಸಂಬದ್ಧಗಳ ಆಗರವಾಗಿ ವೀಕ್ಷಕರ ಸಹನೆಗೊಂದು ಸವಾಲಾಗಿದೆ.

—ಲತಾ ಹೆಗಡೆ, ಹುಬ್ಬಳ್ಳಿ

## ಸುದ್ದಿ ಅಬ್ಬರ: ಘನತೆ ತತ್ತರ

ನಟ ವಿಜಯ್ ರಾಘವೇಂದ್ರ ಅವರು ತಮ್ಮ ಪತ್ನಿಯನ್ನು ಇತ್ತೀಚೆಗೆ ಕಳೆದುಕೊಂಡರು. ಚಿಕ್ಕ ವಯಸ್ಸಿನ ಸ್ಪಂದನಾ ಮೃತಪಟ್ಟಿದ್ದು ದುರದೃಷ್ಟಕರ ಸಂಗತಿ. ಆದರೆ ನಮ್ಮ ಸುದ್ದಿ ವಾಹಿನಿಗಳು ಘಟನೆಯನ್ನು ಮೂರು ದಿನಗಳ ಕಾಲ ಹಗಲು ಇರುಳು ಎಳೆದು ಎಳೆದು ಪ್ರಸಾರ ಮಾಡಿದ್ದು ಎಷ್ಟರಮಟ್ಟಿಗೆ ಸರಿ? ಸಾವನ್ನು ಈ ರೀತಿ ವೈಭವೀಕರಣ ಮಾಡುವುದು ಸರಿಯೇ? ಈ ರೀತಿಯ ಪ್ರಸಾರಕ್ಕೆ ಕಡಿವಾಣ ಇಲ್ಲವೇ?

—ಶಾಲಿನಿ ಮನೋಹರ್, ಬೆಂಗಳೂರು

## ಸಾವಿನ ಮನೆಯಲ್ಲಿ ಲಜ್ಜೆ ಕಳೆದುಕೊಂಡರೆ...

ಸುದ್ದಿ ಮಾಧ್ಯಮಗಳು, ಸೆಲೆಬ್ರಿಟಿಗಳ ಅಂತ್ಯಸಂಸ್ಕಾರವನ್ನು ವೈಭವೀಕರಿಸಿ ನೇರಪ್ರಸಾರ ಮಾಡುವ ಮೂಲಕ ತಮ್ಮ ಶ್ರಾದ್ಧವನ್ನು ತಾವೇ ಮಾಡಿಕೊಳ್ಳುವಂತೆ (ಘಟಶ್ರಾದ್ಧ) ಕಾಣಿಸುತ್ತಿದೆ.

ಶವಪರೀಕ್ಷೆ ನಡೆಸುವ ಸ್ಥಳಕ್ಕೆ ಪ್ರವೇಶ ಕಲ್ಪಿಸಿದರೆ ಆ ದೃಶ್ಯಗಳನ್ನೂ ಸಹ ನೇರ ಪ್ರಸಾರ ಮಾಡುತ್ತಿದ್ದವೋ ಏನೋ? ಯಾವುದೇ ವ್ಯಕ್ತಿ ಮೃತಪಟ್ಟಾಗ ಅವರ ಪಾರ್ಥಿವ ಶರೀರದ ಫೋಟೊ ಅಥವಾ ವಿಡಿಯೊ ಚಿತ್ರೀಕರಣ ಮೃತರಿಗೆ ಮಾಡುವ ಅವಮಾನ. ಆದರೆ ನೇರಪ್ರಸಾರ ಮಾಡುವುದು ಘೋರ ನೀಚಕೃತ್ಯ. ಶವಸಂಸ್ಕಾರದ ದೃಶ್ಯಗಳನ್ನು ನೇರಪ್ರಸಾರ ಮಾಡುತ್ತಾ ಏರುಧ್ವನಿಯಲ್ಲಿ ಅಬ್ಬರಿಸುತ್ತಾ ನಡುನಡುವೆ ಜಾಹೀರಾತುಗಳನ್ನು ತುರುಕಿ ಸಾವಿನ ಮನೆಯಲ್ಲಿ ಲಾಭ ಮಾಡುವ ಸುದ್ದಿವಾಹಿನಿಗಳಿಗೆ ಜ್ಞಾನೋದಯವಾಗುವುದೆಂದು?

ಇವತ್ತಿನ ಪರಿಸ್ಥಿತಿ ನೋಡಿದರೆ ಸೆಲೆಬ್ರಿಟಿಗಳು ತಮ್ಮ ಶವದ ದೃಶ್ಯಗಳನ್ನು ಸುದ್ದಿವಾಹಿನಿಗಳಲ್ಲಿ ನೇರ ಪ್ರಸಾರ ಮಾಡಬಾರದು ಎಂದು ನ್ಯಾಯಾಲಯದಿಂದ ಪ್ರತಿಬಂಧಕಾಜ್ಞೆ ಪಡೆದು ಬ್ರೇಕ್ ಹಾಕಬೇಕಾಗಬಹುದೇ?

—ಪಿ.ಜೆ. ರಾಘವೇಂದ್ರ, ಮೈಸೂರು

ವಾರದ ಪತ್ರ

## ನೈಜ ಸ್ಟಾರ್‌ಗಳ ಹೃದಯಂಗಮ ಸಂಗಮ

ಸ್ಟಾರ್ ಸುವರ್ಣದ ‘ಸುವರ್ಣ ಸೂಪರ್ ಸ್ಟಾರ್’ ರಿಯಾಲಿಟಿ ಶೋವನ್ನು ಸ್ವಾತಂತ್ರ್ಯೋತ್ಸವದ ಅಂಗವಾಗಿ ಯೋಧರ ಪತ್ನಿಯರಿಗಾಗಿ ಆಯೋಜಿಸಿದ್ದು ಅರ್ಥಗರ್ಭಿತವಾಗಿತ್ತು.

ಅದರಲ್ಲಿ 2019ರ ಪುಲ್ವಾಮಾ ದಾಳಿಯ ಸಂದರ್ಭದಲ್ಲಿ ಮದುವೆಯಾಗಿದ್ದ ಜೋಡಿಯ ಕತೆ ಕುತೂಹಲ ಎನಿಸಿತು. ಆಗಷ್ಟೇ ಹಸೆ ಏರಿದ ಪತಿ ತಮ್ಮ ಕರ್ತವ್ಯಕ್ಕೆ ಹಾಜರಾದರು. ಸುಮಾರು ತಿಂಗಳು ತನ್ನ ಪತಿ ಸಂಪರ್ಕಕ್ಕೂ ಸಿಗದೆ ಪರಿತಪಿಸಿದ ದಿನಗಳನ್ನು ಅವರು ನೆನಪಿಸಿಕೊಂಡರು.

ಇನ್ನೊಬ್ಬ ಸೈನಿಕನ ಪತ್ನಿ ತನ್ನ ಕಂದ ದೊಡ್ಡವನಾದ ಮೇಲೆ ದೇಶದ ಗಡಿ ರಕ್ಷಣೆಯ ಕೆಲಸಕ್ಕೆ ನಿಯೋಜಿಸಲು ಹಂಬಲಿಸುತ್ತೇನೆ ಎಂದು ಹೇಳಿದರು. ಮತ್ತೋರ್ವ ಸ್ಪರ್ಧಿಯ ಪತಿ ಸ್ವತಃ ಭಾಗವಹಿಸಿ, ಯೋಧರಾದವರಿಗೆ ಶುಭ ಸಮಾರಂಭಗಳಲ್ಲಿ ಪಾಲ್ಗೊಂಡು ಬಂಧು–ಮಿತ್ರರೊಡನೆ ಖುಷಿ ಹಂಚಿಕೊಳ್ಳುವ ಸಂದರ್ಭ ಒದಗಿ ಬರುವುದೇ ಅಪರೂಪ ಎಂದರು. ಒಟ್ಟಾರೆ ಇದು ಭಾವನಾತ್ಮಕ ಸನ್ನಿವೇಶಗಳಿಗೆ ಸಾಕ್ಷಿಯಾದ ಸಂಚಿಕೆಯಾಗಿತ್ತು.

—ಟಿ.ಎಸ್. ಪ್ರತಿಭಾ ಚಿತ್ರದುರ್ಗ

## ಹಂತಕರಿಗೆ ಬುದ್ಧಿವಾದ ಹಿಡಿಸದು

ಇತ್ತೀಚೆಗೆ ಯುವಕರಲ್ಲಿ ವ್ಹೀಲಿಂಗ್ ಹುಚ್ಚಾಟ ಹೆಚ್ಚಾಗುತ್ತಿದೆ. ಇದು ಸಂಚಾರಿ ವ್ಯವಸ್ಥೆಗೂ ತಲೆನೋವಾಗಿದೆ. ಯುವಕರ ಬೈಕ್ ಸಾಹಸ ನೋಡಿ ಚಿಕ್ಕ ಮಕ್ಕಳು ಸೈಕಲ್ ವ್ಹೀಲಿಂಗ್ ಮಾಡುತ್ತಿದ್ದಾರೆ. ಧಾರಾವಾಹಿಗಳಲ್ಲಿ ಅದನ್ನು ಸಾಹಸ ಕ್ರೀಡೆಯಂತೆ ಬಿಂಬಿಸುತ್ತಿರುವುದು ಅಪಾಯಕಾರಿ ನಿಲುವೇ ಸರಿ.

ಕಲರ್ಸ್ ಕನ್ನಡದ ‘ಗೀತಾ’ದಲ್ಲಿ ನಾಯಕಿಯನ್ನು ಕೊಲ್ಲಲು ಸುಪಾರಿ ಹಂತಕ ವ್ಹೀಲಿಂಗ್ ಮಾಡುತ್ತಾ ಆಕೆ ಪ್ರಯಾಣಿಸುತ್ತಿದ್ದ ಕಾರಿಗೆ ಡಿಕ್ಕಿ ಹೊಡೆಯಲು ಯತ್ನಿಸುವ ದೃಶ್ಯ ತೋರಿಸಿದರು. ಇಂತಹ ಹುಚ್ಚಾಟ ತಮ್ಮ ಪ್ರಾಣಕ್ಕೆ ಮಾತ್ರವಲ್ಲದೆ ಅಮಾಯಕರ ಜೀವಕ್ಕೂ ಮಾರಕ ಎಂಬುದನ್ನು ಮನವರಿಕೆ ಮಾಡಿಕೊಡಬೇಕೇ ಹೊರತು ದೃಶ್ಯ ಪ್ರದರ್ಶನವಲ್ಲ. ಆಗ ವಿಜಯ್ ಹಂತಕನಿಗೆ ಹೇಳುವ ಬುದ್ಧಿಮಾತು ಪರಿಣಾಮಕಾರಿಯಾಗಿರಲಿಲ್ಲ. ಇಡೀ ಕಥೆಯೇ ಸುಪಾರಿ ಕಿಲ್ಲರ್‌ಗಳಿಂದ ತುಂಬಿರುವಾಗ ಬುದ್ಧಿವಾದ ಪ್ರಯೋಜನಕ್ಕೆ ಬಂದೀತೆ?

—ಪುಷ್ಪ ಎನ್.ಕೆ. ರಾವ್, ಉಡುಪಿ

## ಸೋಲುವ ಸುಖದ ಸೊಗಸು

ಸೆಲೆಬ್ರಿಟಿಗಳು ತಮ್ಮ ಅಭಿಮಾನಿಗಳಿಂದ ಅನೇಕ ಅನನುಕೂಲವನ್ನು ಎದುರಿಸಬೇಕಾಗುತ್ತದೆ. ಝೀ ಕನ್ನಡದ ‘ಭೂಮಿಗೆ ಬಂದ ಭಗವಂತ’ದಲ್ಲಿ ಟೆನ್ಷನ್ ಸ್ಟಾರ್‌ನ ಅಭಿಮಾನಿಗಳು ರಸ್ತೆಯಲ್ಲಿ ಗುಂಪುಗೂಡಿ ಓಡಾಡುತ್ತಾರೆ. ಇದರಿಂದ ಆಗುವ ತೊಂದರೆಯನ್ನು ಖಂಡಿಸಿ ಅವರ ಕೋಪಕ್ಕೆ ತುತ್ತಾಗುವ ಶಿವಪ್ರಸಾದ ಗೆಲ್ಲುವ ಪ್ರಸಂಗ ಸುಂದರವಾಗಿ ಮೂಡಿಬಂತು.

ಟೆನ್ಷನ್ ಸ್ಟಾರ್ ತನ್ನ ಅಭಿಮಾನಿಗಳ ಮಾತಿಗೆ ತಲೆದೂಗಿ ಶಿವಪ್ರಸಾದ ಸಾರ್ವಜನಿಕವಾಗಿ ತನ್ನ ಕಾಲು ಹಿಡಿದು ಕ್ಷಮೆ ಕೇಳಬೇಕೆಂದು ಪಟ್ಟು ಹಿಡಿಯುತ್ತಾನೆ. ಇಲ್ಲದಿದ್ದರೆ ಶಿವಪ್ರಸಾದನ ಒಳ ಉಡುಪು ಕಂಪನಿ ಜಾಹೀರಾತಿನಲ್ಲಿ ನಟಿಸುವುದಿಲ್ಲ ಎಂದು ಬೆದರಿಸುತ್ತಾನೆ. ಭಗವಂತನ ಮಾತಿನಂತೆ ಅಂತರಾತ್ಮದ ದನಿಗೆ ಓಗೊಡುವ ಶಿವಪ್ರಸಾದ ಕೆಲಸಕ್ಕೆ ರಾಜೀನಾಮೆ ಕೊಡಲು ಸಿದ್ಧನಾಗುತ್ತಾನೆ. ಇದನ್ನು ತಿಳಿದು ಮನಃ ಪರಿವರ್ತನೆ ಹೊಂದುವ ಟೆನ್ಷನ್ ಸ್ಟಾರ್ ಸ್ವತಃ ಶಿವಪ್ರಸಾದನಲ್ಲಿ ಕ್ಷಮೆ ಕೇಳುತ್ತಾನೆ. ಭಗವಂತ ತಾನು ಗುಣವಂತರ ಅಭಿಮಾನಿ ಎನ್ನುವುದನ್ನು ಕೇಳುವುದೇ ಸೊಗಸು.

—ವಾ. ಮುರಳೀಧರ, ತೀರ್ಥಹಳ್ಳಿ